# ಸನ್ಯಾಸಿನಿ ಅಭಯಾ ಹಂತಕರಿಗೆ 28 ವರ್ಷ ಬಳಿಕ ಶಿಕ್ಷೆ

## ಪಾದ್ರಿ, ಸನ್ಯಾಸಿನಿಯೊಬ್ಬರನ್ನು ದೋಷಿಗಳೆಂದು ಘೋಷಿಸಿದ ಸಿಬಿಐ ಕೋರ್ಟ್ | ಶಿಕ್ಷೆ ಪ್ರಮಾಣ ಇಂದು ಪ್ರಕಟ

**ತಿರುವನಂತಪುರ:** ದೇಶಾದ್ಯಂತ ಸುದ್ದಿಯಾಗಿದ್ದ 28 ವರ್ಷಗಳ ಹಿಂದಿನ ಕೇರಳದ ಕೊಟ್ಟಾಯಂನ ಕ್ರೈಸ್ತ ಸನ್ಯಾಸಿನಿ ಅಭಯಾ ಸಾವಿನ ಪ್ರಕರಣ ಸಂಬಂಧ ಕ್ಯಾಥೋಲಿಕ್ ಚರ್ಚ್ ಪಾದ್ರಿ ಹಾಗೂ ಸನ್ಯಾಸಿನಿಯೊಬ್ಬರನ್ನು ದೋಷಿಗಳೆಂದು ಸಿಬಿಐ ವಿಶೇಷ ನ್ಯಾಯಾಲಯ ತೀರ್ಪು ನೀಡಿದೆ. ಶಿಕ್ಷೆಯ ಪ್ರಮಾಣವನ್ನು ಬುಧವಾರ ಪ್ರಕಟಿಸುವುದಾಗಿ ಕೋರ್ಟ್ ಹೇಳಿದೆ.



ಸಿಸ್ಟರ್ ಅಭಯಾ

28 ವರ್ಷಗಳ ಹಿಂದೆ ಕ್ರೈಸ್ತ ಸನ್ಯಾಸಿನಿ ಅಭಯಾ ಮೃತದೇಹ ಕೊಟ್ಟಾಯಂನ ಪಿಯೂಸ್ ಕಾನ್ವೆಂಟ್‌ನ ಬಾವಿಯಲ್ಲಿ ಪತ್ತೆಯಾಗಿತ್ತು. ಕೇರಳ ಪೊಲೀಸರು ಇದನ್ನು ಆತ್ಮಹತ್ಯೆ ಎಂದು ಭಾವಿಸಿ ಪ್ರಕರಣಕ್ಕೆ ಅಂತ್ಯ ಹಾಡಿದ್ದರು. ಆದರೆ ಮಾನವ ಹಕ್ಕುಗಳ ಕಾರ್ಯಕರ್ತ ಜೊಮನ್ ಪುತನ್ ಪುರಕ್ಕಲ್ ಅವರ ನೇತೃತ್ವದಲ್ಲಿ 'ಜಸ್ಟೀಸ್ ಫಾರ್ ನನ್' ಹೆಸರಿನಡಿ ಆಂದೋಲನ ನಡೆದಿತ್ತು.

1992ರ ಮೇ 15ರಂದು ಅಂದಿನ ಸಿಎಂ ಕೆ. ಕರುಣಾಕರನ್ ಸರಕಾರ ಪ್ರಕರಣವನ್ನು ಸಿಬಿಐಗೆ ವಹಿಸಿ ಶಿಫಾರಸು ಮಾಡಿತ್ತು. 1993ರಿಂದ ಎರಡು ಬಾರಿ ಸಿಬಿಐ ತಂಡಗಳು ತನಿಖೆ ನಡೆಸಿ, ಪ್ರಕರಣ ಮುಕ್ತಾಯಗೊಳಿಸುವಂತೆ ವಿಶೇಷ ಕೋರ್ಟ್‌ಗೆ ಮನವಿ ಮಾಡಿದ್ದವು. 2008ರಲ್ಲಿ ಸಿಬಿಐ ಡಿವೈಎಸ್ಪಿ ನಂದಕುಮಾರ್ ನಾಯರ್ ನೇತೃತ್ವದಲ್ಲಿ ಹೊಸದಾಗಿ ತನಿಖೆ ನಡೆಯಿತು. ಸಿಬಿಐ 2009ರಲ್ಲಿ ಕ್ಯಾಥೋಲಿಕ್ ಚರ್ಚ್‌ನ ಪಾದ್ರಿ ಥಾಮಸ್ ಕುಟ್ಟೂರ್, ಫಾದರ್ ಜೋಸ್ ಪೂಥ್ರಕಾಯಿಲ್ ಹಾಗೂ ಸಿಸ್ಟರ್ ಸೆಫಿ ಅವರ ವಿರುದ್ಧ ದೋಷಾರೋಪ ಹೊರಿಸಿತು. ಸಿಬಿಐ ವಿಶೇಷ ನ್ಯಾಯಾಲಯವು ಕಳೆದ ವರ್ಷ ಸಾಕ್ಷ್ಯಾಧಾರಗಳ ಕೊರತೆಯಿಂದ ಫಾದರ್ ಜೋಸ್ ಅವರನ್ನು ಖುಲಾಸೆಗೊಳಿಸಿತ್ತು. ಈ ನಡುವೆಯೇ ದಶಕಗಳಿಂದ ಮಗಳ ಸಾವಿಗೆ ನ್ಯಾಯ ಎದುರು ನೋಡುತ್ತಿದ್ದ ಅಭಯಾ ಅವರ ಪೋಷಕರಾದ ಥಾಮಸ್ ಮತ್ತು ಲೀಲಮ್ಮ ಕೊನೆಯುಸಿರೆಳೆದಿದ್ದಾರೆ.

**ಅನೈತಿಕ ಸಂಬಂಧ ಕಾರಣ:** 1992ರಲ್ಲಿ ಕೊಟ್ಟಾಯಂನ ಸೇಂಟ್ ಪಿಯೂಸ್ ಕಾನ್ವೆಂಟ್‌ನಲ್ಲಿ ಪಾದ್ರಿ ಥಾಮಸ್ ಕುಟ್ಟೂರ್, ಫಾದರ್ ಜೋಸ್ ಪೂಥ್ರಕಾಯಿಲ್ ಹಾಗೂ ಸಿಸ್ಟರ್ ಸೆಫಿ ಅನೈತಿಕ ಲೈಂಗಿಕ ಸಂಬಂಧ ಹೊಂದಿರುವುದನ್ನು ಸಿಸ್ಟರ್ ಅಭಯಾ ಗಮನಿಸಿದ್ದರು. ಸನ್ಯಾಸಿನಿ ತಮ್ಮ ಮರ್ಯಾದೆ ತೆಗೆಯುತ್ತಾರೆಂಬ ಭಯದಲ್ಲಿ ಮೂವರೂ ಅವರ ಮೇಲೆ ಕೊಡಲಿಯಿಂದ ಹಲ್ಲೆನಡೆಸಿ, ಬಳಿಕ ಮೃತದೇಹವನ್ನು ಬಾವಿಗೆ ಎಸೆದಿದ್ದಾರೆ ಎಂದು ಸಿಬಿಐ ದೋಷಾರೋಪ ಹೊರಿಸಿತು.